For more job news visit : www.kpscvaani.com

ಡಿ.ಆರ್.ಬಿಜಿಕೆ/ಆರ್.ಎಸ್.ಆರ್/ಸೌಕಾ/ರನಂ 1522/ 07 - 08. ದಿ: 29-11-2007

ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ,

ಸೆಕ್ಟರ ನಂ.25, ಪ್ಲಾಟ ನಂ.52-55,
10ನೇ ಮುಖ್ಯ ರಸ್ತೆ, ನವನಗರ-ಬಾಗಲಕೋಟೆ-587103

ನಂ.ಆಡಳಿತ/ಸಿಬ್ಬಂದಿ/ನೇಮಕಾತಿ/2024-25 ದಿನಾಂಕ: 02-07-2024

ಬೇಕಾಗಿದ್ದಾರೆ

ನಮ್ಮ ಸಹಕಾರಿ ಸಂಘದ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಅ.ನಂ.	ಹುದ್ದೆಯ ವಿವರ	ಹುದ್ದೆಯ
1	ಕಿರಿಯ ಸಹಾಯಕರು	150
2	ಸಿಪಾಯಿ/ಚಾಲಕ/ಕಾವಲುಗಾರ	65

ಸೂಚನೆಗಳು:-

1) ಅಭ್ಯರ್ಥಿಗಳು ತಮ್ಮ ಸ್ವ-ಹಸ್ತಾಕ್ಷರದಿಂದ ಅಭ್ಯರ್ಥಿಯ ಪೂರ್ಣ ಹೆಸರು, ಸಂಪೂರ್ಣ ವಿಳಾಸ, ಜನ್ಮ ದಿನಾಂಕ, ವಿದ್ಯಾರ್ಹತೆ ವಿವರ, ಕಂಪ್ಯೂಟರ ಜ್ಞಾನದ ಬಗ್ಗೆ ಸಂಪೂರ್ಣ ಸ್ವವಿವರದೊಂದಿಗೆ ಭಾವಚಿತ್ರ ಸಹಿತ ಅರ್ಜಿಯನ್ನು ಸಲ್ಲಿಸಬೇಕು.

2) ಪ್ರಕಟಣೆಯ ದಿನಾಂಕಕ್ಕೆ ಅಭ್ಯರ್ಥಿಯ ವಯೋಮಿತಿ

ಅ) ಸಾಮಾನ್ಯ ವರ್ಗದವರಿಗೆ 35 ವರ್ಷಗಳು

ಬ) ಹಿಂದುಳಿದ ವರ್ಗದವರಿಗೆ 38 ವರ್ಷಗಳು

ಕ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗದವರಿಗೆ 40 ವರ್ಷಗಳು ಮೀರತಕ್ಕದ್ದಲ್ಲ

3) ವಿದ್ಯಾರ್ಹತೆ:

1) **ಕಿರಿಯ ಸಹಾಯಕರು:** ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ (ರೆಗ್ಯೂಲರ್) ಪಡೆದು ಅದರಲ್ಲಿ 60% ಹಾಗೂ ಮೇಲ್ಪಟ್ಟು ಅಂಕ ಪಡೆದ ಅಭ್ಯರ್ಥಿಗಳು ಅರ್ಜಿ ಹಾಕಲು ಅರ್ಹರು. ಅವರು ಕಡ್ಡಾಯವಾಗಿ ಕಂಪ್ಯೂಟರ್ ಕೋರ್ಸ ಮಾಡಿರಬೇಕು ಹಾಗೂ ಅದರಲ್ಲಿ ಪರಿಣಿತಿಯನ್ನು ಪಡೆದಿರಬೇಕು.

2) **ಸಿಪಾಯಿ/ಚಾಲಕ/ಕಾವಲುಗಾರ:** ಎಸ್.ಎಸ್.ಎಲ್.ಸಿ. ಪಾಸಾಗಿ ಅದರಲ್ಲಿ 50% ಹಾಗೂ ಮೇಲ್ಪಟ್ಟು ಅಂಕ ಪಡೆದ ಅಭ್ಯರ್ಥಿಗಳು ಅರ್ಹರು.

4) **ಅ) ಅರ್ಹತಾ ಪರೀಕ್ಷಾ ಅವಧಿ:**

ನೇಮಕಾತಿ ದಿನಾಂಕದಿಂದ 2 ವರ್ಷದವರೆಗೆ ಅರ್ಹತಾ ಪರೀಕ್ಷಾವಧಿ ಇರುವುದು.

ಬ) ವೇತನ :

ಕಿರಿಯ ಸಹಾಯಕರಿಗೆ ಆರಂಭಿಕ ವೇತನ ಮಾಸಿಕ ರೂ.25284-00

ಸಿಪಾಯಿ/ಚಾಲಕ/ಕಾವಲುಗಾರ ಮಾಸಿಕ ರೂ.18060-00

ಇದರೊಂದಿಗೆ ಭವಿಷ್ಯನಿಧಿ, ಇಎಸ್‌ಐಸಿ, ಗ್ರ್ಯಾಚ್ಯುಟಿ, ಬೋನಸ್ ಸೌಲಭ್ಯಗಳು ಅನ್ವಯಿಸುತ್ತವೆ.

5) ಅಭ್ಯರ್ಥಿಗಳು ಸಹಕಾರಿ ಸಂಘದ ವಿವಿಧ ಜಿಲ್ಲೆಗಳಲ್ಲಿರುವ/ಪ್ರಾರಂಭಿಸಲಿರುವ ಶಾಖೆಗಳಲ್ಲಿ ಸೇವೆ ಮಾಡಲು ಸಿದ್ಧರಿರಬೇಕು.

6) ಅರ್ಜಿಯನ್ನು ಅರ್ಜಿ ಶುಲ್ಕ ರೂ.500/- ರೊಂದಿಗೆ ಜನ್ಮ ದಿನಾಂಕದ ದಾಖಲೆ, ವಿದ್ಯಾರ್ಹತೆ ದಾಖಲೆ, ಕಂಪ್ಯೂಟರ್ ಕೋರ್ಸ ಸರ್ಟಿಫಿಕೇಟ್ ಹಾಗೂ ಜಾತಿ ಪ್ರಮಾಣ ಪತ್ರದ ದೃಢೀಕೃತ ನಕಲು ಪ್ರತಿ ಲಗತ್ತಿಸಿ ದಿನಾಂಕ 03-08-2024 ರ ಒಳಗಾಗಿ ಸಹಕಾರಿ ಸಂಘದ ಪ್ರಧಾನ ಕಛೇರಿಗೆ ಮುಟ್ಟುವಂತೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಅರ್ಜಿ ಶುಲ್ಕದ ಡಿ.ಡಿ.ಯನ್ನು ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಬಾಗಲಕೋಟೆ ಇವರ ಹೆಸರಿನಲ್ಲಿ ಬಾಗಲಕೋಟೆಯಲ್ಲಿಯೇ ಪಾವತಿಯಾಗುವಂತೆ ಸಲ್ಲಿಸಬೇಕು.

7) **ಅರ್ಜಿಗಳನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಸೆಕ್ಟರ ನಂ.25, ಪ್ಲಾಟ ನಂ.52-55, 10ನೇ ಮುಖ್ಯ ರಸ್ತೆ, ನವನಗರ, ಬಾಗಲಕೋಟೆ-587103 ಇವರಿಗೆ ಸಲ್ಲಿಸಬೇಕು.**

8) ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ರದ್ದುಪಡಿಸುವ, ನಿಬಂಧನೆಗಳನ್ನು ಹಾಗೂ ಹುದ್ದೆಗಳ ಸಂಖ್ಯೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.

9) ಅಭ್ಯರ್ಥಿಗಳನ್ನು ಶೈಕ್ಷಣಿಕ ಅರ್ಹತೆ ಮೇಲೆ 1:5 ಅನುಪಾತದಲ್ಲಿ ಅರ್ಹತಾ ಪಟ್ಟಿಯ ಪ್ರಕಾರ ಸಂದರ್ಶನಕ್ಕೆ ಕರೆಯಲಾಗುವುದು. ಯಾವುದೇ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆ ಬಂದಿಲ್ಲವೆಂದರೆ ಅರ್ಹತೆ ಹೊಂದಿಲ್ಲವೆಂದು ತಿಳಿಯಬೇಕು. ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.

10) ಸಂದರ್ಶನದ ಕರೆಯೋಲೆ ನಿಗದಿತ ಅವಧಿಯಲ್ಲಿ ಯಾವುದೇ ಕಾರಣಕ್ಕಾಗಿ ತಲುಪದಿದ್ದಲ್ಲಿ